**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 500/2013** **ದಿನಾಂಕಃ 30-10-2025**

**ಸಿ ಡಬ್ಲೂ : 4**

**ಪಿ ಡಬ್ಲೂ : 3**

-------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಅನುಬಾಯಿ ವಿಟೋಬಾ ಬಂಡಗರ |
| ಗಂಡ/ ತಂದೆಯ ಹೆಸರು | ವೀಟೊಬಾ |
| ವಯಸ್ಸು | 60 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಸಾಃ ಜನವಾಡ |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ನನ್ನ ಮಗಳು, ಆರೋಪಿಯು ನನ್ನ ತಮ್ಮ . ಸುಮಾರು 13 ವರ್ಷಗಳ ಹಿಂದೆ ಆರೋಪಿಯು ನನ್ನ ಮಗಳಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆ ಬಡೆ ಮಾಡಿರುತ್ತಾನೆ. ಚಾಸಾ 1 ಆ ಸಮಯದಲ್ಲಿ ನನ್ನ ಮನೆಯಲ್ಲಿ ಇರುತ್ತಿದ್ದಳು. ಆರೋಪಿಯು ನನಗೆ ಬೆನ್ನಿಗೆ , ಕಪಾಳಿಗೆ ಮೈ ಕೈಗೆ ಹೊಡೆದಿರುತ್ತಾನೆ. ಆರೋಪಿಯು ನನ್ನ ಮಗಳಿಗೆ ಕಪಾಳಿಗೆ , ಮೈ ಕೈಗೆ ಹೂಡೆ ಬಡೆ ಮಾಡಿರುತ್ತಾನೆ ಹಾಗೂ ಕಲ್ಲು ತೆಗೆದುಕೊಂಡು ಬಂದು ಹಾಕಲು ಪ್ರಯತ್ನಿಸಿರುತ್ತಾನೆ. ಆರೋಪಿಯು ಸಾರಾಯಿ ಚಟಕ್ಕಾಗಿ ಹೊಡೆಬಡೆ ಮಾಡಿರುತ್ತಾನೆ. ಗಲಾಟೆಯಾದಾಗ ರಾತ್ರಿ 9.00 ಗಂಟೆ ಆಗಿತ್ತು. ನಂತರ ನಾನು ಹಾಗೂ ನನ್ನ ಮಗಳು ಐಗಳಿ ಪೊಲೀಸರ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇವೆ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

**ವಾಟೀ ಸವಾಲುಃ - ಮಾನ್ಯ ಸಹಾಯಕ  ಸರ್ಕಾರಿ ಅಭಿಯೋಜಕರಿಂದಃ**

ಗಲಾಟೆಯಾಗುವ 7 ತಿಂಗಳ ಪೂರ್ವದಲ್ಲಿ ಆರೋಪಿಯು ಚಾಸಾ 1 ಇವಳಿಗೆ  ಬಂಗಾರ ತೆಗೆದುಕೊಂಡು ಬಾ ಎಂದು ಹೊಡೆ ಬಡೆ ಮಾಡುವುದು , ಅವಾಚ್ಯ ಶಬ್ದಗಳಿಂದ ಬೈಯುವುದು ಮಾಡುತ್ತಿದ್ದ ಎಂದರೆ ಸರಿ. ನಂತರ ಚಾಸಾ 5 ಹಾಗೂ 6 ರವರು ಆರೋಪಿಗೆ ಬುದ್ದಿವಾದ ಹೇಳಿದ್ದರಿಂದ ನನ್ನ ಮಗಳು ಚಾಸಾ 1 ಇವಳನ್ನು ಆರೋಪಿಯ ಮನೆಯಲ್ಲಿ ಬಿಟ್ಟು ಬಂದಿರುತ್ತೇವೆ ಎಂದರೆ ಸರಿ. ಗಲಾಟೆಯಾಗುವ ಪೂರ್ವದಲ್ಲಿ 3 ತಿಂಗಳ ಮೊದಲು ಚಾಸಾ 1 ಗರ್ಬಿಯಾಗಿದ್ದ ಕಾರಣ ನನ್ನ ಮನೆಗೆ ಬಂದಿದ್ದಳು ಎಂದರೆ ಸರಿ.  ದಿಃ 29.05.2012 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಆರೋಪಿಯು ನನ್ನ ಮನೆಗೆ ಬಂದು ಚಾಸಾ 1 ಇವಳಿಗೆ ಬಂಗಾರ ತೆಗೆದುಕೊಂಡು ಬಾ ಎಂದು ಹೇಳಿ ಅವಳಿಗೆ ಅವಾಚ್ಯ ಶಬ್ದಗಳಿಂದ ಬೈದು ನನ್ನನ್ನು ಹಾಗೂ ಚಾಸಾ1 ಇವಳನ್ನು ಹೊಡೆ ಬಡೆ ಮಾಡಿರುತ್ತಾನೆ ಎಂದರೆ ಸರಿ.

**ವಾಟೀ ಸವಾಲುಃ ಆರೋಪಿ ಪರ ಶ್ರೀ .  ಎನ್ ವೈ ವೈ ವಕೀಲರಿಂದಃ**

ಆರೋಪಿಯು ಖಾಸ ನನ್ನ ತಮ್ಮ ಎಂದರೆ ಸರಿ. ಆರೋಪಿ ಹಾಗೂ ನನ್ನ ಮಗಳು ಚಾಸಾ 1 ಸುಮಾರು 2 ವರ್ಷಗಳ ಕಾಲ ಚೆನ್ನಾಗಿ ಬಾಳ್ವೆ ಮಾಡಿರುತ್ತಾರೆ. ಆ ಎರಡು ವರ್ಷಗಳ ಕಾಲ ಆರೋಪಿಯು ಸಾರಾಯಿ ಕುಡಿಯುತ್ತಿರಲಿಲ್ಲ ಎಂದರೆ ಸಾಕ್ಷಿಯು ಮದುವೆಯಾದ ನಂತರ ಕುಡಿಯಲು ಪ್ರಾರಂಭಿಸಿರುತ್ತಾನೆ ಎಂದು ನುಡಿಯುತ್ತಾರೆ.  ಆರೋಪಿಯು ಯಾವತ್ತು ಸಹ ನನ್ನ ಮಗಳಿಗೆ ಬಂಗಾರ ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ಮನೆ ಸುಮಾರು 50 ಪೂಟ ಅಂತರದಲ್ಲಿ ಇರುತ್ತವೆ ಎಂದರೆ ಸರಿ.  ಆರೋಪಿಯು ನನ್ನ ಮನೆಗೆ ಹೋಗುವುದು ಬರುವುದು ಮಾಡುತ್ತಿದ್ದ ಹಾಗೂ ನಮ್ಮ ಸಂಬಂಧ ಚೆನ್ನಾಗಿ ಇತ್ತು ಎಂದರೆ ಸರಿ. ಆಗ ಆರೋಪಿಯು ಬಂಗಾರ ತೆಗೆದುಕೊಂಡು ಬಾ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ 1 ಆರೋಪಿಯ ಜೊತೆ ಜಗಳವಾದ ಬಳಿಕ ನನ್ನ ಮನೆಗೆ ಬಂದಿರುತ್ತಾಳೆ. ಆರೋಪಿಯು ನನ್ನನ್ನು ಹಾಗೂ ಚಾಸಾ1 ಇವಳನ್ನು ಕೈಯಿಂದ ಹೊಡೆ ಬಡೆ ಮಾಡಿರುತ್ತಾನೆ. ಆರೋಪಿಯು ಹೊಡೆ ಬಡೆ ಮಾಡಿಲ್ಲ , ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಸುತ್ತ ಮುತ್ತಲೂ ಸುಮಾರು ಜನರು ಇರುತ್ತಾರೆ ಎಂದರೆ ಸಾಕ್ಷಿಯು ಸ್ವಲ್ಪ

ದೂರದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವ ದಿನ ಚಾಸಾ 1 ಚೀರಾಡಿದ್ದರಿಂದ ಎಷ್ಟು ಜನ ಬಂದಿದ್ದರು ಎಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಜಗಳವು ಸುಮಾರು ಅರ್ಧ ಗಂಟೆ ಆಗಿರುತ್ತದೆ. ನಾವು ಜಗಳವಾದ ದಿನ ರಾತ್ರಿ ಪೊಲೀಸ ಠಾಣೆಗೆ ಹೋಗಿರುತ್ತೇವೆ ಆಗ ಸಮಯ ಎಷ್ಟು ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪಿರ್ಯಾದಿ ನೀಡಿದ ಬಳಿಕ ಖಾಸಗಿ ಆಸ್ಪತ್ರೆಗೆ ಹೋಗಿ ತೋರಿಸಿರುತ್ತೇವೆ.

ಆರೋಪಿಯು ಚಾಸಾ 1 ಇವಳಿಗೆ ಬಂಗಾರ ತೆಗೆದುಕೊಂಡು ಬಾ ಎಂದು ಹೇಳಿಲ್ಲ ಹಾಗೂ ನಮಗೆ ಹೊಡೆ ಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ವಿಠ್ಠಲ ಸರಗರ ಈತನು ನನ್ನ ತಂಗಿಯ ಗಂಡ. ವಿಠ್ಠಲ ಸರಗರ ಈತನು ಪ್ರಭಾವಿ ವ್ಯಕ್ತಿಯಾಗಿರುತ್ತಾನೆ ಎಂದರೆ ಸರಿಯಲ್ಲ. ವಿಠ್ಠಲ ಸರಗರ ಹಾಗೂ ಚಾಸಾ 1 ಇವರ ಸಂಬಂಧ ಚೆನ್ನಾಗಿ ಇರುತ್ತದೆ ಆದ್ದರಿಂದ ಈ ಖೊಟ್ಟಿ ಪಿರ್ಯಾದಿಯನ್ನು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ವೈಯಕ್ತಿಕವಾಗಿ ಹೇಳಿಕೆಯನ್ನು ಬರೆದುಕೊಟ್ಟಿಲ್ಲ. ವಿಠ್ಠಲ ಸರಗರ ಈತನಿಗೋಸ್ಕರ ನಾನು ಹಾಗೂ ಚಾಸಾ 1 ಸೇರಿಕೊಂಡು ಆರೋಪಿಯ ವಿರ್ದು ಖೊಟ್ಟಿ ಪಿರ್ಯಾದಿ ದಾಖಲಿಸಿ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.